ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: 20 ವಿಧಾನ ಪರಿಷತ್ತಿನ [illegible]

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ ದಿನಾಂಕ : DATE : 16/12/20

# ಫಲಿಸಲಿಲ್ಲ ಬಿಜೆಪಿ ಮಾಸ್ಟರ್ ಪ್ಲ್ಯಾನ್

**ಬೆಂಗಳೂರು:** ರಾತ್ರಿಯಿಡೀ ಜಾಗರಣೆ ನಡೆಸಿ ಮಾಡಿದ ಬಿಜೆಪಿ ಯೋಜನೆ ತಲೆಕೆಳಗಾಗಿದ್ದು, ಪಕ್ಷಕ್ಕೆ ಇರಿಸು -ಮುರಿಸು ತಂದಿದೆ. ಇದೆಲ್ಲ ಬೇಡವಾಗಿತ್ತು ಎನ್ನುವ ಮಾತುಗಳು ಕೇಳಿ ಬಂದಿವೆ. ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ನೇತೃತ್ವದಲ್ಲಿ ಹಿರಿಯ ಸಚಿವರುಗಳು ಸಭೆ ನಡೆಸಿ, ಸದನ ಪ್ರಾರಂಭವಾಗುತ್ತಿದ್ದಂತೆ ಏನೇನು ಮಾಡಬೇಕು ಎನ್ನುವ ಬಗ್ಗೆ ಯೋಜನೆ ಸಿದ್ಧಪಡಿಸಿದ್ದರು. ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆ ಮಾಡಿರುವ ಕಾರಣ, ಯಾವ ಕಾರಣಕ್ಕೂ ಅವರನ್ನು ಸಭಾಪತಿ ಸ್ಥಾನದಲ್ಲಿ ಕೂರಲು ಬಿಡುವುದು ಬೇಡ. ಮುಂದಿನ ನಡಾವಳಿ ಸಲೀಸಾಗಿಯೇ ನಡೆಯುತ್ತದೆ ಎನ್ನುವುದು ಬಿಜೆಪಿ ಲೆಕ್ಕಾಚಾರವಾಗಿತ್ತು. ಆದರೆ ಬಿಜೆಪಿ ಯೋಜನೆ ಕಲಾಪ ಆರಂಭವಾಗಿ 15 ನಿಮಿಷಕ್ಕೆ ಕೈ ಕೊಟ್ಟಿದ್ದು ಅಚ್ಚರಿ. ಜೆಡಿಎಸ್ ಬೆಂಬಲವಿದ್ದರೂ, ಸಭಾಪತಿ ಇಳಿಸಲು ಆಗದೆ, ಮತ್ತೆ ಅಧಿವೇಶನ ತನಕ ಕಾಯುವ ಸ್ಥಿತಿ ಬಿಜೆಪಿಗೆ ಬಂದೊದಗಿತು. ಇಷ್ಟೆಲ್ಲ ಹೈಡ್ರಾಮಾ ನಡುವೆ ಮುಂದಿನ ಅಧಿವೇಶನದವರೆಗೂ ಕುರ್ಚಿ ಸೇಫ್ ಎಂದು ಸಭಾಪತಿ ನಿಟ್ಟುಸಿರು ಬಿಟ್ಟಿದ್ದಾರೆ.

**ಕಾಂಗ್ರೆಸ್ ನಡೆ:** ಬಿಜೆಪಿ ಯೋಜನೆಗಳೆಲ್ಲವೂ ತಿಳಿದಿದ್ದ ಕಾಂಗ್ರೆಸ್ ಅದನ್ನು ಎದುರಿಸಲು ಸಿದ್ಧವಾಗಿತ್ತು. ಬೆಳಗ್ಗೆ ಸಿಎಲ್‌ಪಿ ನಾಯಕ ಸಿದ್ದರಾಮಯ್ಯ ನೇತೃತ್ವದಲ್ಲಿ ಸಭೆ ಸೇರಿ ಚರ್ಚಿಸಿತ್ತು. ಬಿಜೆಪಿ ಸೋಮವಾರವೇ ಉಪ ಸಭಾಪತಿಗೆ ಪತ್ರ ಬರೆದಿದ್ದರಿಂದ ಇದೇ ರೀತಿ ಸದನ ನಡೆಯಬಹುದೆಂದು ಲೆಕ್ಕ ಹಾಕಿದ್ದರು. ಅದನ್ನು ಎದುರಿಸಲು ಸಿದ್ಧರಾಗಿದ್ದರು. ಎಲ್ಲ ತಮ್ಮ ಎಣಿಕೆಯಂತೆ ನಡೆಯುವಂತೆ ನೋಡಿಕೊಂಡರು.



ವಿಧಾನ ಪರಿಷತ್‌ನಲ್ಲಿ ಗಲಾಟೆಯಾಗಿರುವುದು ಅಪರೂಪ. ಪ್ರಜ್ಞಾವಂತರು, ಹಿರಿಯರು ಇರುವ ಸದನಕ್ಕೆ ಕಳಂಕ ತಂದ ಘಟನೆ. ಕಾಂಗ್ರೆಸ್ ಸೃಷ್ಟಿಸಿದ ಗದ್ದಲ, ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿರುವುದು ಸರಿಯಲ್ಲ. ಪ್ರಜಾತಂತ್ರ ವಿರೋಧಿಯಾಗಿ ಸಭಾಪತಿ ನಡೆದುಕೊಂಡಿದ್ದಾರೆ.

| ಆರ್.ಅಶೋಕ್ ಕಂದಾಯ ಸಚಿವ

ಜನವರಿಯಲ್ಲಿ ರಾಜ್ಯಪಾಲರು ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡುವ ಸಂದರ್ಭದಲ್ಲಿ ಸಭಾಪತಿ ಮೇಲಿನ ಅವಿಶ್ವಾಸ ಗೊತ್ತುವಳಿ ಬಗ್ಗೆ ತೀರ್ಮಾನ ಆಗುತ್ತಿತ್ತು. ಆದರೆ, ಬಿಜೆಪಿ ಕೇವಲ ಇನ್ನು 15 ದಿನ ಕಾಯಲು ಸಾಧ್ಯವಿಲ್ಲ ಎಂದು ಅಧಿಕಾರಕ್ಕಾಗಿ ದುಂಡಾವರ್ತನೆ ಮಾಡಿದ್ದು ಖಂಡನೀಯ.

| ಕೆ.ಸಿ.ಕೊಂಡಯ್ಯ
ಮೇಲ್ಮನೆ ಕಾಂಗ್ರೆಸ್ ಸದಸ್ಯ

ಚಿಂತಕರ ಚಾವಡಿ, ದೊಡ್ಡವರ ಮನೆಯ ಘನತೆಯನ್ನು ಕಾಂಗ್ರೆಸ್ ಹಾಳು ಮಾಡಿದೆ. ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆಯಾಗದಂತೆ ಕುಮ್ಮಕ್ಕು ನೀಡಿದರು. ಇಂತಹ ಕೆಟ್ಟ ನಡವಳಿಕೆಯ ಪರಿಣಾಮವನ್ನು ಕಾಂಗ್ರೆಸ್ ಎದುರಿಸಲಿದೆ.

| ಡಾ.ಸಿ.ಎನ್.ಅಶ್ವತ್ಥ ನಾರಾಯಣ ಉಪ ಮುಖ್ಯಮಂತ್ರಿ